Reg No. B G 155

30-6-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮಹಾಜನ್ ಆಯೋಗ ವರದಿ ಜಾರಿಗಾಗಿ ಕನಡಿಗರ ಒತ್ತಾಯ

ಶ್ರೀ ಕೃಷ್ಣಪ್ಪ ಮತ್ತು ಶ್ರೀ ದಯಾನಂದ ಸಾಗರ್‌ರವರ ಪತ್ರಿಕಾ ಸಮ್ಮೇಳನ

ರಾಜ್ಯದ ಮಾಜಿ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪ ಮತ್ತು ಮಾಜಿ ಉಪ ಮಂತ್ರಿ ಶ್ರೀ ದಯಾನಂದ ಸಾಗರ್‌ರವರು ಬೆಂಗಳೂರಿನಲ್ಲಿ ಮೊನ್ನೆ ಮೊನ್ನೆ ಪತ್ರಿಕಾ ಸಮ್ಮೇಳನ ಕರೆದು ಇತ್ತ ಹೇಳಿಕೆ ಇಡೀ ರಾಜ್ಯದಲ್ಲಿ ಕೋಲಾಹಲ ಎಬ್ಬಿಸಿದೆ.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

ಹಳೆಯ ಮೈಸೂರು ಶೋಷಣೆಗೆ ಗುರಿ ಆಗಿದೆ ಎಂದು ಹೇಳಿದ ಅವರು, ಈ ಶೋಷಣೆಯ ಕಾರಣವನ್ನು ತೆಲಂಗಾಣಿಯ ಕೋವಿನ ಒಂದು ವರ್ಗದ ಮೇಲೆ ಆರೋಪಿಸಿದ್ದಾರೆ. ಶೋಷಣೆ ಮುಂದುವರಿದರೆ ತೆಲಂಗಾಣಮಂಥಹ ಚಳುವಳಿ ಹೂಡುವುದಾಗಿ ಎಚ್ಚರಿಸಿದ್ದಾರೆ.

ತೆಲಂಗಾಣಾ ಪರಿಸ್ಥಿತಿಗೆ ಮೈಸೂರನ್ನು ಹೋಲಿಸುವುದು ಸರಿಯಲ್ಲ. ಆಂಧ್ರ ರಾಜ್ಯ ಸ್ಥಾಪನೆ ಕಾಲದಲ್ಲಿ ತೆಲಂಗಾಣಾ ಪ್ರದೇಶಕ್ಕೆ ಕೆಲವುಭರವಸೆಗಳನ್ನು ನೀಡಿದ್ದು ಅವುಗಳ ಪಾಲನೆ ಆಗದ ಕಾರಣ ಇಂದು ಆ ಚಳುವಳಿ ಎದ್ದಿದೆ.

ಮೈಸೂರಿನ ಪರಿಸ್ಥಿತಿ ಹಾಗಲ್ಲ. ರಾಜರ ಹಾಗೂ ದಿವಾನರುಗಳ ದಕ್ಷ ಆಡಳಿತದಲ್ಲಿ ಮೈಸೂರು ಪ್ರಗತಿ ಹೊಂದಿತು. ಆ ಪ್ರಗತಿ ಮೈಸೂರು ವಿಶಾಲ ಆದನಂತರ ಅಲ್ಲ, ಮುಖ್ಯ ಮಂತ್ರಿ ಆಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರಿಗೆ ಮೈಸೂರು ನಗರದಲ್ಲಿ ಸನ್ಮಾನವಿತ್ತ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಡಾ॥ ಎಂ. ವಿಶ್ವೇಶ್ವರಯ್ಯನವರ ಮಾತಿನಲ್ಲಿ ಹೇಳಬೇಕಾದರೆ, 1947 ರ ನಂತರ ಯಾವ ಪ್ರಗತಿಯೂ ಆಗಿಲ್ಲ.

ಮಂತ್ರಿ ಸ್ಥಾನದಲ್ಲಿದ್ದಾಗ ಕೃಷ್ಣಪ್ಪನವರಾಗಲೀ, ದಯಾನಂದಸಾಗರ್‌ರವರಾಗಲೀ ಶೋಷಣೆಯ ಮಾತು ಎತ್ತಲಿಲ್ಲ ? ಈಗ ಶೋಷಣೆ ಎಂಬದು ಅವರ ಕಣ್ಣಿಗೆ ಬಿದ್ದಿತ್ತೇನು ?

ಕೃಷ್ಣಪ್ಪ ಮತ್ತು ಸಾಗರ್ ಅವರ ಮಾತಿಗೆ ಜನ ಎಷ್ಟು ಬೆಲೆ ಕೊಡುತ್ತಾರೋ ತಿಳಿಯದು.

ಇಡೀ ಮೈಸೂರೇ ಅಭಿವೃದ್ಧಿಗೊಳ್ಳಬೇಕೆಂಬ ಗುರಿಯಿಂದ ಸರ್ವರೂ ಶ್ರಮಿಸಬೇಕೆ ವಿನಃ, ಸಂಕುಚಿತ ಮನೋಭಾವದ ಜಾತೀಯತೆಯನ್ನು ಮುಂದಿಟ್ಟುಕೊಂಡು ಗುರಿ ಸಾಧಿಸುತ್ತೇನೆಂಬುದು ಈ ಯುಗದಲ್ಲಿ ಅದರಲ್ಲೂ ಜಾತ್ಯಾತೀತರೆಂದು ಹೆಸರುಗಂಡ ಕಾಂಗ್ರೆಸಿಗರು ಪ್ರಯತ್ನಿಸುವುದು ಹಾಸ್ಯಾಸ್ಪದ.

ನತ್ತವನಿಗೆ ಕಾಗ್ ತಲಪಿಸಿದ್ದು

ಜರ್ಮನಿಯ ರಟಲ್ಸ್‌ಡಾರ್ಫ್‌ದ ಮೂರು ಮಂದಿ ನಿವಾಸಿಗಳು ಹೊರ ಊರಿನಲ್ಲಿದ್ದು ಗಾಮದ ಮತಗುರುವಿಗೆ ಪೋಸ್ಟ್ ಕಾರ್ಡ್ ಹಾಕಿದರು ಆದರೆ ಆ ಗುರುವು 10 ವರ್ಷಗಳ ಹಿಂದೆಯೇ ಸತ್ತು ಹೋಗಿದ್ದನು. ಚತುರನಾದ ಪೋಸ್ಟ್‌ಮೇ ಏನು ಮಾಡಬೇಕೆಂದು ಪರ್ಯಾಲೋಚಿಸಿ, ಕಡೆಗೆ ಆ ಕಾರ್ಡನ್ನು ಅವನ ಗೋರಿಯ ಮೇಲೆ ಇಟ್ಟುಬಿಟ್ಟ !

★

ಬ್ರಿಟಮುಳಗುತ್ತಿದೆ

ಲಂಡ್— ಉತ್ತರ ವೇಲ್ಸಿನಿಂದ ಯಾರ್ಕ್‌ಷೈರುನರೆಗೆ ಬಿಟ್ಟು, ಮಿಕ್ಕ ಎಲ್ಲಾ ಬ್ರಿಟನ್ನು ಇಂಗ್ಲೀಷ್ ಛಾನಲ್ ಮತ್ತು ಉತ್ತರ ಸಮುದ್ರದಲ್ಲಿ ಮುಳುಗುತ್ತಿದ್ದು, ದೇಶದ ಉತ್ತರ ಭಾಗ ಮತ್ತು ಸ್ಕಾಟ್ಲೆಂಡ್ ಮೇಲಕ್ಕೆ ಏಳುತ್ತಿರುವದೆಂದು ಸೈನ್ಸ್ ಜರ್ನಲ್ ಪ್ರಕಟಿಸಿದೆ.

★

ಶಾಂತಿಯುತ ಸಹಬಾಳ್ವೆ

ಜಕರ್ತಾ — ತಾಟಸ್ಥ್ಯತೆ ಮತ್ತು ಶಾಂತಿಯುತ ಸಹಬಾಳ್ವೆ ವಿಷಯದಲ್ಲಿ ತನ್ನ ನಂಬಿಕೆಯನ್ನು ಭಾರತ ಪ್ರಧಾನಿ ಇಂದಿರಾರವರೂ ಮತ್ತು ಇಂಡೋನೇಷಿ ಅಧ್ಯಕ್ಷ ಸುಹಾರ್ತೋ ದೃಢೀಕರಿಸಿದರು.

●

ರುಜು ಸಂಗ್ರಹ ಚಳವಳಿ

ಬೆಂಗಳೂರು— ಕನ್ನಡ ಚಳವಳಿಗಾರರು, ಕೇಂದ್ರವು ಮಹಾಜನ ಕಮಿಷನ್ ವರದಿಯನ್ನು ಕೂಡಲೇ ಜಾರಿಗೆ ತರುವಂತೆ ಒತ್ತಾಯಮಾಡಲು, ರುಜು ಸಂಗ್ರಹ ಚಳವಳಿಯನ್ನು ಪ್ರಾರಂಭಿಸಲು ಯೋಜಿಸಿರುವರು.

ಹಣ ಮಾಯ

ಬೆಂಗಳೂರು— ಬೆಂಗಳೂರು–ಮದರಾಸು ಮೇಲ್ ರೈಲಿನಲ್ಲಿ ಮೇಲ್‌ಬ್ಯಾಗ್‌ನಲ್ಲಿ ಕಳುಹಿಸಲಾಗಿದ್ದ ರೂ. 6000 ಹಣ ಮಾಯವಾಗಿದೆಯೆಂದು ರೈಲ್ವೇ ಆಫೀಸರೊಬ್ಬರು ಪೋಲೀಸರಿಗೆ ದೂರಿತ್ತಿರುವರು

ಜಾಕ್‌ಪಾಟ್

ಬೆಂಗಳೂರು— ನಿನ್ನೇ ಕುದುರೆಜೂಜಿನಲ್ಲಿ ಜಾಕ್‌ಪಾಟ್ ಪೂಲ್ ಹಣ ವಿಲೇ ಆಗಲಿಲ್ಲ : ಶೇಖರವಾಗಿರುವ 142113 ರೂಗಳು ಮುಂದಕ್ಕೆಡಲಾಗಿದೆ.

ರಾಷ್ಟ್ರಾಧ್ಯಕ್ಷರ ಆಳ್ವಿಕೆ

ನವದೆಹಲಿ— ಇಲ್ಲಿ ಬಿಡಾರ ಮಾಡಿರುವ ತೆಲಂಗಾಣಾ ಪ್ರಜಾಸಮಿತಿ ನಾಯಕರು ಕಾಂಗ್ರೆಸ್ ಪಾರ್ಲಿಮೇಂಟರಿ ಬೋರ್ಡನ್ನು ಆಂಧ್ರದಲ್ಲಿ ಅಧ್ಯಕ್ಷರ ಆಳ್ವಿಕೆ ಜಾರಿತರಲು ಒತ್ತಾಯಮಾಡಲಿರುವರು.

ಗೋಮಾಂಸ ತಿಂದು ಸತ್ತರು

ರಾಮನಗರ—ಉಗ್ರಹಳ್ಳಿಯಲ್ಲಿನ ಹರಿಜನ ಕೇರಿಯಲ್ಲಿ ಸತ್ತ ಹಸುವಿನ ಮಾಂಸ ತಿಂದವರಲ್ಲಿ 3 ಜನ ಸತ್ತು ಹಲವರು ರೋಗಗ್ರಸ್ತರಾದರು – ಆ ಹಸುವು ನಾರದಿ ರೋಗದಿಂದ ಸತ್ತಿತ್ತು.

ಬಹಿರಾಕಾಶಕ್ಕೆ ಕೋತಿ

ಕೇಪ್ ಕೆನಿಡಿ— 14 ಪೌಂಡು ತೂಕದ ಕೋತಿಯನ್ನು ಭೂಮಿಯನ್ನು ಸುತ್ತಲು ಬಹಿರಾಕಾಶವಿಮಾನದಲ್ಲಿ ಕ

ವಾರ್ತಾವಿಶೇಷಗಳು

ಬೆಂಗಳೂರು— ರಾಜ್ಯದ ವಿವಿಧ ಭಾಗಗಳಲ್ಲಿ ಹಾಕಿರುವ ಬಂಡವಾಳಗಳ ಮತ್ತು ವಿವಿಧ ಕೋನಿನನವರಿಗೆ ಕೊಟ್ಟಿರುವ ಕೆಲಸಗಳ ಅಂಕಿಅಂಶಗಳನ್ನು ಎಂಪಿಸಿಸಿ ಕಾರ್ಯಕಾರಿ ಸಮಿತಿ ಮತ್ತು ಶಾಸನಸಭಾ ಕಾಂಗ್ರೆಸ್ ಪಾರ್ಟಿ ಜಂಟಿ ಸಭೆಯಲ್ಲಿ ಇತರ ಮುಖ್ಯಮಂತ್ರಿಗಳು ಮಾಡಿರುವ ವಾಗ್ದಾನದ ವಿವರವನ್ನು ಆಗಸ್ಟ್ ಪ್ರಥಮ ವಾರದಲ್ಲಿ ಸಿದ್ಧವಾಗುವುದೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು.

ವಾಷಿಂಗ್ಟನ್ — ಈಶಾನ್ಯ ಪ್ಯಾರಿಸ್ ರಸ್ತೆಗೆ, ಗಾಂಧೀಜೀ ಶತಮಾನೋತ್ಸವ ಸ್ಮರಣಾರ್ಥವಾಗಿ 'ಮಹಾತ್ಮಾ ಗಾಂಧಿ ರಸ್ತೆ' ಎಂದು ಹೆಸರಿಡಲಾಗುವುದು.

ಲಕ್ಸಂಬರ್ಗ್— ಇಂಡಿಯಾಕ್ಕೆ 89 ಸಾವಿರ ಟನ್ ಗೋಧಿ ದೊರೆಯಲು ಆಹಾರ ನೆರವು ಗ್ರಾಂಟು ಒಪ್ಪಂದಕ್ಕೆ ಇಂಡಿಯಾ ಮತ್ತು ಯೂರೋಪಿಯನ್ ಕಾಮನ್ ಮಾರ್ಕೆಟ್ ರುಜು ಮಾಡಿದವು.

ನ್ಯೂಯಾರ್ಕ್.... ಅಧ್ಯಕ್ಷ ನಿಕ್ಸನ್ನರು ಮುಂದಿನ ತಿಂಗಳು ಪ್ರಪಂಚ ಸುತ್ತ ಪ್ರವಾಸ ಪ್ರಾರಂಭಿಸುವರು.

ಬೆಂಗಳೂರು— ಫಾರಂ ಡೆಟರ್ಸ್ ಶಾಸನ ವಿರುದ್ಧ ಹಾಕಿರುವ ರಿಟ್ ಅರ್ಜಿಗಳಲ್ಲಿ 1200 ಹೈಕೋರ್ಟಿನಲ್ಲಿ ಅಡ್ಮಿಟ್ ಆಗಿವೆ : ಸಹಸ್ರಾರು ಅರ್ಜಿಗಳು ಹಾಕಲ್ಪಟ್ಟಿವೆ.

ನವದೆಹಲಿ— ಪೂರ್ವ ಜರ್ಮನಿಯ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಮುಂದಿನ ವರ್ಷದಿಂದ ತೆಲುಗು ವ್ಯಾಸಂಗವನ್ನು ಏರ್ಪಡಿಸಲು ಯೋಜಿಸಲಾಗಿದೆ.

ಮದ್ರಾಸು— ತಮಿಳುನಾಡಿನಲ್ಲಿ ಗುತ್ತಿಗೆಗೆ ಅಥವಾ ಬಾಡಿಗೆಗೆ ಕೊಡಲಾಗಿರುವ ದೇವಾಲಯಗಳ ಭೂಮಿಯನ್ನು ಬಾಡಿಗೆದಾರರಿಗೇ ಮನೆನಿವೇಶನಗಳಾಗಿ ಮಾರಲು ಸರಕಾರ ಆಜ್ಞೆ ಹೊರಡಿಸಲಿದೆ.



Protect the Cow

SHAKTI SUDHA

A Superb Tonic

ವೃಡ್‌ಲಾಂಡ್ಸ್ ಜಯಪ್ರದ 6 ನೇ ವಾರ

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

.... ನೋಡಲು ತಪ್ಪಬೇಡಿ ....

ದು ನಿ ಯಾ Duniya

ಪಾತ್ರ– ದೇವಾನಂದ್, ವೈಜಯಂತಿಮಾಲಾ, ಜಾನಿವಾಕರ್, ಬಾಲರಾಜ್ ಸಹಾನಿ

ತಾ|| 23-5-69 ರಿಂದ ಪ್ರವೇಶದರಗಳನ್ನು ಕೆಳಗೆನಮೂದಿಸಿರುವಂತೆ ಬದಲಾಯಿಸಿದೆ

ಬಾಕ್ಸ್ ರೂ 2–90, ಬಾಲ್ಕನಿ ರೂ 2–05, ಕೆಳಗಡೆ ರೂ 1–20, 0–75

[ದಿನ 3 ಪ್ರದರ್ಶನಗಳು]

ಆಪೆರಾ— 27-6-69 ರಿಂದ

— ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಕನ್ನಡ ಚಿತ್ರ —

ಮಕ್ಕಳೇ ಮನೆಗೆ ಮಾಣಿಕ್ಯ

ನಟವರ್ಗ— ಉದಯಕುಮಾರ್, ಬಿ. ವಿ. ರಾಧಾ, ಆದವಾನಿ ಲಕ್ಷ್ಮಿದೇವಿ, ಕೈಲಾಶ್ರೀ, ಜಯ್, ದಿನೇಶ್, ಮಾಸ್ಟರ್, ಕೃಷ್ಣಕುಮಾರ್, ಬೇಬಿ ಪ್ರತಾಂತ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press, Chamarajapuram, Mysore 4